



ಬಾಂಬ್ ದಾಳಿಯಿಂದ ತಪ್ಪಿಸಿಕೊಳ್ಳಲು ನಾಲ್ಕು ಮಕ್ಕಳೊಂದಿಗೆ ವಿಯೆಟ್ನಾಂ ಮಹಿಳೆಯ ಸಾಹಸ. ಈ ಚಿತ್ರ ತೆಗೆದ ಛಾಯಾಗ್ರಾಹಕನಿಗೆ ಪುಲಿಟ್ಜರ್ ಪ್ರಶಸ್ತಿ ಬಂತು. ಈ ಅಮ್ಮ–ಮಕ್ಕಳು ಏನಾದರು?

### ತಲುಪುವುದು ಹೇಗೆ?

ಬೆಂಗಳೂರಿನಿಂದ ಹೋ ಚಿ ಮಿನ್ ಸಿಟಿಗೆ 'ವಿಯೆಟ್‌ಜೆಟ್ ಏರ್' ವಾರಕ್ಕೆ ನಾಲ್ಕು ದಿನ (ಸೋಮವಾರ, ಬುಧವಾರ, ಶುಕ್ರವಾರ ಮತ್ತು ಭಾನುವಾರ) ಅಗ್ಗದ ದರದ ನೇರ ವಿಮಾನಯಾನ ಸೌಲಭ್ಯ ಕಲ್ಪಿಸಿದೆ. ಹೋ ಚಿ ಮಿನ್ ಸಿಟಿ ಮತ್ತು ಅದರ ಆಸುಪಾಸಿನಲ್ಲಿ ಈ ತಾಣಗಳಿವೆ.

ಗೊತ್ತಾದಾಗ ಆಸಕ್ತಿಯು ಕೊಂಚ ಹೆಚ್ಚಾಯಿತು. ಅಮೆರಿಕದ ಬಲಾಢ್ಯ ಸೇನೆಗೆ ಚಳ್ಳೆಹಣ್ಣು ತಿನ್ನಿಸಿದ ಗೆರಿಲ್ಲಾ ಪಡೆಯ ನೆಲೆಯಾಗಿದ್ದ ತಾಣವದು ಎಂದು ತಿಳಿದ ಬಳಿಕವಂತೂ ಆದಷ್ಟು ಬೇಗ ಆ ಸುರಂಗದೊಳಗೆ ಒಮ್ಮೆ ಹೆಜ್ಜೆ ಹಾಕುವ ತವಕ. ನೆಲದ ಮೇಲೆ ಎಲ್ಲಿಯೇ ಇರಲಿ, ಶತ್ರುಸೇನೆಯನ್ನು ಗುರಿಯಾಗಿಸಿ ಬಾಂಬ್ ದಾಳಿ ನಡೆಸುವಂತಹ ಅಮೆರಿಕದ ಯುದ್ಧ ವಿಮಾನಗಳು ನೆತ್ತಿಯ ಮೇಲೆಯೇ ಹಾರುತ್ತಿದ್ದರೂ ಗೆರಿಲ್ಲಾ ಪಡೆಗೆ ಭದ್ರ ನೆಲೆಯನ್ನು ಒದಗಿಸಿದ ತಾಣವಿದು. ಗಗನದಲ್ಲಿ ಅಮೆರಿಕ ಸೇನೆ, ನೆಲದಡಿಯಲ್ಲಿ ವಿಯೆಟ್ನಾಂನ ಗೆರಿಲ್ಲಾ ಸೇನೆ. ಎರಡೂ ಪಡೆಗಳ ನಡುವೆ ವರ್ಷಗಳವರೆಗೆ ಇಲ್ಲಿ ನಡೆದದ್ದು ಭೀಕರ ಸಮರ. ಅತ್ಯಾಧುನಿಕ ಶಸ್ತ್ರ–ಸಲಕರಣೆಗಳನ್ನು ಹಿಡಿದುಬಂದರೂ ಕು ಚಿ ಟನಲ್ ಒಂದು ರೀತಿಯಲ್ಲಿ ಅಭೇದ್ಯ ಕೋಟೆಯಂತಾಗಿ ಕೊನೆಕೊನೆಗೆ ಅಮೆರಿಕದ ಸೇನೆಯೇ ಸೋತು ಕೈಚೆಲ್ಲುವಂತಾಗಿದ್ದೊಂದು ರೋಚಕ ಕಥೆ.

ಕು ಚಿ ಟನಲ್ ಕಥೆ ಹೇಳುವಾಗ ಆ್ಯಂಡ್ರ್ಯೂ, ತಾವು ಗೈಡ್ ಎನ್ನುವುದನ್ನು ಮರೆತು 'ಹಿಸ್ಟರಿ ಪ್ರೊಫೆಸರ್' ರೂಪದಲ್ಲಿ ನಮ್ಮ ಮುಂದೆ ನಿಂತಿದ್ದರು. ಹಿಂದಿನ ಎರಡು ದಿನಗಳ ಪ್ರವಾಸದಲ್ಲಿ ಏನನ್ನೇ ಆಗಲಿ ಪರಿಚಯಿಸುವಾಗ ಕಾಣದಂತಹ ಭಾವಾವೇಶವು ಆಗ ಅವರಲ್ಲಿ ಪುಟಿದೆದ್ದು ನಿಂತಿತ್ತು. ತಮ್ಮ ಪೂರ್ವಜರ ಹೋರಾಟದ ಕಥೆಯನ್ನು ಅವರು ಎದೆಯುಬ್ಬಿಸಿ ಹೇಳುತ್ತಿದ್ದರು. ವಿಯೆಟ್ನಾಂ ಜನರ ಕರ್ತೃತ್ವ ಶಕ್ತಿಗೆ, ಸೃಜನಶೀಲತೆಗೆ, ರಣತಂತ್ರಕ್ಕೆ, ಜಾಣ್ಮೆಗೆ ಮತ್ತು ಅವರ ತೋಳ್ಬಲಕ್ಕೆ ಸಾಕ್ಷಿಯಾಗಿತ್ತು ನಾವು ನಿಂತ ಜಾಗದ ಅಡಿಯಲ್ಲಿದ್ದ ಆ ಸುರಂಗ ಜಾಲ. ದಟ್ಟ ಕಾಡಿನ ನಡುವೆ ಸುಮಾರು 200 ಕಿ.ಮೀ. ಉದ್ದದ ಸುರಂಗವನ್ನು ನಿರ್ಮಿಸುವುದೆಂದರೆ ತಮಾಷೆಯ ಮಾತೇ? ಜೇಡರ ಬಲೆಯಂತೆ ಭೂಮಿಯ

### ನಪಲಮ್ ಬಾಲಕಿ

1972ರ ಜೂನ್ 8ರಂದು ಅಮೆರಿಕ ಸೇನೆಯು ನಪಲಮ್ ಬಾಂಬ್‌ಗಳನ್ನು ಟ್ರಾಂಗ್ ಬಾಂಗ್ ಜಿಲ್ಲೆಯ ಮೇಲೆ ಚೆಲ್ಲಿತು. ತೇ ನಿನ್ ಎಂಬ ಊರು ಈ ಬಾಂಬ್ ದಾಳಿಯಿಂದ ಸಂಪೂರ್ಣವಾಗಿ ನಿರ್ನಾಮವಾಯಿತು. ಒಂಬತ್ತು ವರ್ಷದ ಬಾಲಕಿ ಫಾನ್ ಥಿ ಕಿಮ್ ಪುಕ್‌ಳ ದೇಹವು ಬಾಂಬ್ ಚಾಚಿದ ಕೆನ್ನಾಲಗೆಯಿಂದ ಗಂಭೀರವಾಗಿ ಗಾಸಿಗೊಂಡಿತು. ಗಾಯಗೊಂಡು ಅಳುತ್ತಾ ಓಡಿಬಂದ ಬಾಲಕಿಯ ಚಿತ್ರವನ್ನು ಯುದ್ಧದ ಫೋಟೊಜರ್ನಲಿಸ್ಟ್ ನಿಕ್ ಉಟ್ ಸೆರೆಹಿಡಿದಿದ್ದರು. ಪುಲಿಟ್ಜರ್ ಸೇರಿದಂತೆ ಅಸಂಖ್ಯ ಪ್ರಶಸ್ತಿಗಳು ಆ ಚಿತ್ರಕ್ಕೆ ಒಲಿದುಬಂದವು. ಚಿತ್ರದಲ್ಲಿರುವ ಬಾಲಕಿ ಚಿತ್ರವಾಗಿ ಉಳಿದಳಷ್ಟೆ.

